ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ ದಿನಾಂಕ 11-2-94ರಲ್ಲಿ ಲಿಖಿತ ಮೂಲಕ ಉತ್ತರಿಸುವ 4ನೇ ಪಟ್ಟಿಯಲ್ಲಿರುವ 21 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 130ನ್ನು ಹೊರತುಪಡಿಸಿ ಉಳಿದ 20 ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ತಾಂಡಾಗಳು, ಹ್ಯಾಮ್ಲೆಟ್‌ಗಳು ಹಾಗೂ ವಾಡೀಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ.

182 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರದ್) : ಮಾನ್ಯ ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ತಾಂಡಾಗಳು, ಹ್ಯಾಮ್ಲೆಟ್ ಹಾಗೂ ವಾಡೀಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರ ಇದುವರೆವಿಗೂ ಕೈಗೊಂಡಿರುವ ಕ್ರಮಗಳೇನು?

ಇ) ಮೇಲ್ಕಂಡ ಸ್ಥಳಗಳನ್ನು ಕಂದಾಯ ಗ್ರಾಮಗಳನ್ನಾಗಿ ಯಾವಾಗ ಪರಿವರ್ತಿಸಲಾಗುವುದು?

ಶ್ರೀ ಧರ್ಮಸಿಂಗ್(ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಕರ್ನಾಟಕ ಭೂಕಂದಾಯ ಕಾಯ್ದೆ, 1964 ಮತ್ತು ಕರ್ನಾಟಕ ಭೂಕಂದಾಯ ನಿಯಮಗಳು, 1966ರ ಪ್ರಕಾರ ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲು ಅರ್ಹವಿರುವ ಲಂಬಾಣಿ ತಾಂಡ:ಹ್ಯಾಮ್ಲೆಟ್, ಮುಂತಾದವುಗಳನ್ನು ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಕಳುಹಿಸಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಇದರ ಬಗ್ಗೆ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಕೋರಿ ಕರಡು ಅಧಿಸೂಚನೆಗಳನ್ನು ರಾಜ್ಯಪತ್ರದಲ್ಲಿ ಈಗಾಗಲೇ ಪ್ರಕಟಿಸಲಾಗಿದೆ. ಈ ಮಧ್ಯೆ ಗ್ರಾಮಗಳಿಗೆ ಹೆಸರುಗಳನ್ನು ಬದಲಾಯಿಸುವ ಹಾಗೂ ಹೊಸ ಹೆಸರುಗಳನ್ನು ಸೂಚಿಸುವ ಬಗ್ಗೆ ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು ಪಾಲಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ಇದರ ಬಗ್ಗೆ ಅಂತಿಮ ತೀರ್ಮಾನವನ್ನು ತೆಗೆದುಕೊಂಡ ನಂತರ ತಾಂಡ:ಹ್ಯಾಮ್ಲೆಟ್, ಮುಂತಾದವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಪರಿಶೀಲನೆಯ ನಂತರ ಮತ್ತು ಅಗತ್ಯವಿದ್ದಲ್ಲಿ ಕೇಂದ್ರ ಸರ್ಕಾರದ ಅನುಮತಿ ಪಡೆದು.

ಸೆಟಲೈಟ್ ನಗರಗಳ ಸ್ಥಾಪನೆ ಕುರಿತು

174 (ಸಿ) - ಶ್ರೀ ಶಫಿ ಅಹ್ಮದ್ (ತುಮಕೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೆಟಲೈಟ್ ನಗರಗಳನ್ನು ಸ್ಥಾಪಿಸುವ ಯೋಜನಾ ಹಂತ, ತುಮಕೂರು ಬೃಹತ್ ನಗರ ಯೋಜನೆ ಮತ್ತು ಯೋಜನಾ ವಿವರಗಳು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) ವಿಶೇಷ ಅಭಿವೃದ್ಧಿ ಬ್ಯಾಂಕ್ನ ನೆರವಿಗಾಗಿ ಸಿದ್ಧಪಡಿಸುತ್ತಿರುವ ಯೋಜನೆಯಡಿ ತುಮಕೂರು ನಗರವನ್ನು ಬೆಂಗಳೂರಿಗೆ ವಿಕರ್ಷಕವನ್ನಾಗಿ ಅಭಿವೃದ್ಧಿಗೊಳಿಸಲು

ಉದ್ದೇಶಿಸಲಾಗಿದೆ. ಯೋಜನೆ ಸಿದ್ಧತೆಗಾಗಿ ಸಹಾಯಕ್ಕಾಗಿ ತಾಂತ್ರಿಕ ಸಹಾಯದ ಒಪ್ಪಂದಕ್ಕಾಗಿ ಕರ್ನಾಟಕ ಸರಕಾರದ ಪರವಾಗಿ ಸಹಿ ಹಾಕಲಾಗಿದೆ. ಯೋಜನೆಯ ವಿವರಗಳನ್ನು ಹಾಗೂ ಕಾರ್ಯಗತಗೊಳಿಸುವುದು ವಿಶ್ವಬ್ಯಾಂಕ್ ಅಭಿವೃದ್ಧಿ ಬ್ಯಾಂಕ್ ನಿಯುಕ್ತಿಗೊಳಿಸಿದ ಕನ್ಸಲ್ಟೆಂನ್ಸಿಗಳ ವರದಿಯು ಕೇಂದ್ರ ಸರಕಾರದ ಮುಖಾಂತರ ಸ್ವೀಕೃತವಾದಾಗ ಅಂತಿಮಗೊಳಿಸಲಾಗುವುದು.

Regularisation of the Urban Properties

174(d) - Sri Shafi Ahmed (Tumkur) : Will the Minister for urban Development be pleased to state ?

1) The action taken by the Government for regularisation of the urban properties and when it will be implemented?

Sri. Chowda Reddy (Minister for Urban Dev.) :

1) There is no such proposal before the Government.

ಧಾರವಾಡ ತಾಲ್ಲೂಕಿನ ಉದ್ಯಮಿಗಳಿಗೆ ಸರ್ಕಾರ ಸಬ್ಸಿಡಿ ನೀಡುವುದರ ಬಗ್ಗೆ

132- ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ತಾಲ್ಲೂಕಿನಲ್ಲಿ ಇಲ್ಲಿಯವರೆಗೆ ಎಷ್ಟು ಉದ್ಯಮಿಗಳಿಗೆ ಸಬ್ಸಿಡಿಯನ್ನು ಕೊಡಬೇಕಾಗಿರುವುದು (ಉದ್ಯಮಿಗಳ ಹೆಸರು ಮತ್ತು ಮೊತ್ತದ ಬಗ್ಗೆ ವಿವರವಾಗಿ ಕೊಡುವುದು);

ಆ) ಧಾರವಾಡ ತಾಲ್ಲೂಕಿನಲ್ಲಿ ಆದ್ಯತೆ ಮೇರೆಗೆ ಸಬ್ಸಿಡಿಯನ್ನು ಕೊಡಬೇಕೆಂದು ಸರ್ಕಾರದ ನಿಯಮಗಳಿದ್ದರೂ ಕೂಡ ಸಬ್ಸಿಡಿಯನ್ನು ಕೊಡಲು ವಿಳಂಬವಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇನ್ನು ಎಷ್ಟು ದಿವಸಗಳಲ್ಲಿ ಈ ಹಣವನ್ನು ಕೊಡಲಾಗುವುದು?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು);

ಅ) 33 ಉದ್ಯಮಿಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಬೇಕಾಗಿದೆ.

ವಿವರವನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಆ) ಕಳೆದ ವರ್ಷಗಳಲ್ಲಿ ಸಾಕಷ್ಟು ರಾಜ್ಯ ಸಹಾಯ ಧನ ಒದಗಿಸಿಲ್ಲದ ಕಾರಣ, ಮಂಜೂರಾತಿ ಪಡೆದ ಘಟಕಗಳಿಗೆ ಸಹಾಯಧನವನ್ನು ಬಿಡುಗಡೆ ಮಾಡಲು ವಿಳಂಬವಾಗಿರುತ್ತದೆ. 1993-94ನೇ ಸಾಲಿನಲ್ಲಿ ಸರ್ಕಾರವು ಇದಕ್ಕಾಗಿ 30.00 ಕೋಟಿ ಆಯವ್ಯಯವನ್ನು ಒದಗಿಸಿದ್ದು ಧಾರವಾಡ ತಾಲ್ಲೂಕಿನಲ್ಲಿ ಈಗಾಗಲೇ ಡಿಸೆಂಬರ್ 1992ರ ವರೆಗೆ ಮಂಜೂರಾತಿಯನ್ನು ಪಡೆದ ಎಲ್ಲಾ ಘಟಕಗಳಿಗೆ ಸಹಾಯಧನ ಪಾವತಿ ಮಾಡಲಾಗಿದೆ. ಮತ್ತು ಜನವರಿ-ಮಾರ್ಚ್ 1993ರವರೆಗೆ ಈಗಾಗಲೇ ಭಾಗಶಃಹಣವನ್ನು ಪಾವತಿ ಮಾಡಲಾಗಿದೆ. ಧಾರವಾಡ ಅಭಿವೃದ್ಧಿ ಕೇಂದ್ರದಲ್ಲಿ (ಧಾರವಾಡ ಗ್ರೋತ್ ಸೆಂಟರ್) ಸ್ಥಾಪಿಸಲ್ಪಟ್ಟ ಘಟಕಗಳಿಗೆ 9-5-1993ರವರೆಗೆ ಮಂಜೂರಾತಿ ಮಾಡಲ್ಪಟ್ಟ ಘಟಕಗಳಿಗೂ ಸಹ ಸಹಾಯಧನವನ್ನು ಬಿಡುಗಡೆ ಮಾಡಲಾಗಿದೆ.

ಇ) 1993-94ನೇ ಸಾಲಿನಲ್ಲಿ ಹೆಚ್ಚುವರಿ ಸಹಾಯಧನವನ್ನು ಬಿಡುಗಡೆ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಅದು ಬಿಡುಗಡೆಯಾದ ನಂತರ, ಸಹಾಯಧನವನ್ನು ಪಾವತಿ ಮಾಡಲಾಗುವುದು.